# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಜಾಣ ಪರೀಕ್ಷೆ – ೨೦೨೪

ಪ್ರಶ್ನೆಪತ್ರಿಕೆ – ೧

## ನಡುಗನ್ನಡ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

**೧. ಕೆಳಗಿನವುಗಳಲ್ಲಿ ಯಾವುದಾದರೂ ಹತ್ತು ಪದಗಳಿಗೆ ಅರ್ಥ ಬರೆಯಿರಿ.** **೧೦x೧=೧೦**

೧) ಉಪದ್ರ ೨) ಪೊಡವಿ ೩) ಸೊಣಗ ೪) ಕಮ್ಮಟ
೫) ಶರಧಿ ೬) ಉದಕ ೭) ನಾರಿವಾಳ ೮) ಪಾವುಗೆ
೯) ಪಣೆ ೧೦) ಅಗ್ಗಳ ೧೧) ಖೇಡ ೧೨) ಪತ್ತನ
೧೩) ನಿರ್ವೇಗ ೧೪) ವಿಷಯ ೧೫) ಕದಳೀಫಲ

**೨. ಈ ಪದ್ಯದ ಅರ್ಥ–ಭಾವಗಳನ್ನು ವಿವರಿಸಿ** **೧x೧೦=೧೦**

ಅ) ಹೊನ್ನು ಮಾಯೆ ಎಂಬರು, ಹೊನ್ನು ಮಾಯೆಯಲ್ಲ
ಹೆಣ್ಣು ಮಾಯೆ ಎಂಬರು, ಹೆಣ್ಣು ಮಾಯೆಯಲ್ಲ
ಮಣ್ಣು ಮಾಯೆ ಎಂಬರು ಮಣ್ಣು ಮಾಯೆಯಲ್ಲ
ಮನದ ಮಂದಣ ಆಸೆಯೆ ಮಾಯೆ ಕಾಣಾ ಗುಹೇಶ್ವರ.

**೩. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೪x೫=೨೦**

೧) ಅಕ್ಕಮಹಾದೇವಿ ೨) ಜೇಡರದಾಸಿಮಯ್ಯ ೩) ಅಲ್ಲಮಪ್ರಭು
೪) ಪುರಂದರದಾಸ ೫) ಶಿವಕೋಟ್ಯಾಚಾರ್ಯ ೬) ಪಂಚತಂತ್ರ

**೪. ಮೂರು ಪ್ರಶ್ನೆಗಳಿಗೆ ವಿವರವಾದ ಉತ್ತರ ಬರೆಯಿರಿ.** **೩x೧೦=೩೦**

ಅ) ‘ಆಧ್ಯಾತ್ಮ ಹೆಚ್ಚೇನು ಅವಿದ್ಯೆ ಕಡಿಮೆಯೇನು’ ಕವಿತೆಯನ್ನು ವಿವರಿಸಿ.

ಆ) ಹೆಣ್ಣು–ಹೆಣ್ತನ ಕುರಿತ ಸಮಾಜದ ತರತಮ ದೃಷ್ಟಿಯನ್ನು ಅಕ್ಕಮಹಾದೇವಿ ವಚನಗಳ ಹಿನ್ನೆಲೆಯಲ್ಲಿ ವಿವರಿಸಿ.

ಇ) ‘ಆಚಾರವಿಲ್ಲದ ನಾಲಿಗೆ’ – ಭಕ್ತಿಮಾರ್ಗದ ಮೂಲಕ ನಾಲಿಗೆಯ ಪರಿಶುದ್ಧತೆಯನ್ನು ಕೀರ್ತನೆಯ ಹಿನ್ನೆಲೆಯಲ್ಲಿ ವಿವರಿಸಿ.

ಈ) ಕಾರ್ತಿಕೇಯ ಋಷಿಗೆ ವೈರಾಗ್ಯಕ್ಕೆ ಕಾರಣವಾಗುವ ಸಂಗತಿಯನ್ನು ವಿವರಿಸಿ

(ಪು.ತಿ.ನೋ.)



**೫. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮಕ ಉತ್ತರ ಬರೆಯಿರಿ** **೩x೧೦=೩೦**

ಅ) ‘ಮಾನಗೇಡಿ ಮಂದಿಹುಟ್ಟಿ’ ಕವಿತೆಯ ಸಾಮಾಜಿಕ ವಿಡಂಬನೆಯನ್ನು ಚರ್ಚಿಸಿ.

ಆ) ದೇವರದಾಸಿಮಯ್ಯನ ವಚನಗಳಲ್ಲಿನ ತತ್ವವಿಚಾರಗಳನ್ನು ಚರ್ಚಿಸಿ.

ಇ) ಅಂಬಿಗರ ಚೌಡಯ್ಯ ವಚನಗಳಲ್ಲಿನ ಆಶಯ ವಿವರಿಸಿ.

ಈ) ಮುಕ್ತಿಮಾರ್ಗಕ್ಕೆ ಏನು ಮಾಡಬೇಕೆಂದು ‘ಎಲ್ಲಾರೂ ಮಾಡುವುದು ಹೊಟ್ಟೆಗಾಗಿ’ ಕೀರ್ತನೆಯ ಹಿನ್ನೆಲೆಯಲ್ಲಿ ಚರ್ಚಿಸಿ.

ಉ) ಕೃಷ್ಣ ಮತ್ತು ಬಲರಾಮರು ಹೇಗೆ ವಿಜಯ ಸಾಧಿಸಿದರು.

* * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಜಾಣ ಪರೀಕ್ಷೆ – ೨೦೨೪

**ಪ್ರಶ್ನೆಪತ್ರಿಕೆ – ೨**

## ನಾಟಕ ಮತ್ತು ಪ್ರಬಂಧ ಸಾಹಿತ್ಯ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ನಾಟಕ

**೧. ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿ. ೧x೧೫=೧೫**

ಅ. ತಿರುಕನನ್ನು ನೋಡಿದ ತರುಣರು ವ್ಯಕ್ತಪಡಿಸಿದ ಪ್ರತಿಕ್ರಿಯೆಯ ರೀತಿಯನ್ನು ಕುರಿತು ಬರೆಯಿರಿ.

ಆ. 'ತಾನು ಶಾಸ್ತ್ರಿಗಳ ಶಿವನಲ್ಲ' – ಎಂದು ಶಿವನು ಹೇಳಿದ ಸಂದರ್ಭ ವಿವರಿಸಿ.

**೨. ಕೆಳಗಿನ ವಾಕ್ಯಗಳಲ್ಲಿ ಮೂರಕ್ಕೆ ಸಂದರ್ಭದೊಡನೆ ಸ್ಪಷ್ಟೀಕರಿಸಿರಿ. ೩x೫=೧೫**

ಅ. ನನ್ನೆದೆಯೆ ದೇಗುಲ; ನನ್ನೊಲ್ಮೆಯದೆ ಪೂಜೆ

ಆ. ರೈತರೇ ಧರೆಯೊಳಿಹ ಜಂಗಮ ಕಲ್ಪವೃಕ್ಷಗಳು.

ಇ. ಈತಂಗೆ ಯಾವ ಫಲವನು ಎಲ್ಲಿ ಮುಚ್ಚಿರುವೆ?

ಈ. ಹರಕೆಯ ಹೊತ್ತೆ, ಕಾಣಿಕೆ ತೆತ್ತೆ, ದೇವರಿಗೆ ಶರಣೆಂದು ಬೇಸತ್ತೆ.

ಉ. ಊರ ತೋಟಿಯು ನೀನು; ಜಗದ ತೋಟಿಯು ನಾನು!

### ಗದ್ಯ ಸಾಹಿತ್ಯ

**೩. ಕೆಳಗಿನವುಗಳಲ್ಲಿ ಐದಕ್ಕೆ ಟಿಪ್ಪಣಿ ಬರೆಯಿರಿ. ೫x೫=೨೫**

ಅ. ಅನ್ನ ನೀರಿಗೆ ತಪ್ಪದ ಅಲೆದಾಟ

ಆ. ಶರಣರಲ್ಲಿ ಕಂಡುಬರುವ ಜೀವನ ಪ್ರೀತಿ

ಇ. ಕವಿರಾಜಮಾರ್ಗಕಾರನ ತಿಳುವಳಿಕೆ

ಈ. ಐಹೊಳೆಯ ಬೌದ್ಧಾವಶೇಷಗಳು

(ಪು.ತಿ.ನೋ.)

ಜಾ/೨

ಉ. ಸಿದ್ಧಲಿಂಗಯ್ಯ

ಊ. ಬಡತನವ ಬುಡಮಟ್ಟ ಕೀಳಬನ್ನಿ

ಋ. 'ಧರ್ಮಕ್ಕಾಗಿ ಧರ್ಮವಲ್ಲ, ಜೀವನಕ್ಕಾಗಿ ಧರ್ಮ'

**೪. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ೩x೧೦=೩೦**

ಅ. ಮಂಚನಬೆಲೆ ತಾತನ ಕುರಿತಂತೆ ಇದ್ದ ಲೇಖಕರ ಅನುಭವಗಳನ್ನು ವಿವರಿಸಿ.

ಆ. 'ನಮಗಿರುವ ಕೊರತೆ ಮಿದುಳಿನದಲ್ಲ, ಇರುವಷ್ಟು ಮಿದುಳನ್ನು ಬಳಸುವುದು' ಎಂದು ಲೇಖಕರು ಹೇಳಲು ಕಾರಣವೇನು?

ಇ. ವಿದ್ಯಾ ಮೊದಲ ಸಲ 'ಅಂಗಡಿ ಕೇಳಲು' ಹೋದಾಗಿನ ಅನುಭವವನ್ನು ವಿವರಿಸಿ.

ಈ. ಸಂಬಂಧ ಎನ್ನುವುದು ಮಾನವೀಯ ನೆಲೆಯನ್ನು ಕಳೆದುಕೊಳ್ಳುತ್ತಿದೆ ಎಂಬುದನ್ನು ವಿವರಿಸಿ.

ಉ. ಮೂಢನಂಬಿಕೆಗಳ ನಿರ್ಮೂಲನೆಯಲ್ಲಿ ವೈಚಾರಿಕತೆಯ ಮಹತ್ವವನ್ನು ನಿರೂಪಿಸಿರಿ.

**೫. ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. ೧x೧೫=೧೫**

ಅ. ಶ್ರೀ ಸಾಮಾನ್ಯನ ಕಷ್ಟ ಅರಿಯಲು ದೇವರಾಜ ಅರಸು ಅವರು ಅನುಸರಿದ ಕ್ರಮ ಮತ್ತು ಅವರಿಗಾದ ಅನುಭವಗಳನ್ನು ವಿವರಿಸಿ.

ಆ. ಲೇಖಕಿಗೆ ಕ್ಯಾನ್ಸರ್ ಬಂದ ನಂತರದಲ್ಲಿ, ನಡೆದ ಬೆಳವಣಿಗೆಯನ್ನು ಕುರಿತು ಬರೆಯಿರಿ.

***

# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಬೆಂಗಳೂರು – ೧೮

## ಕನ್ನಡ ಜಾಣ ಪರೀಕ್ಷೆ – ೨೦೨೪

### ಪ್ರಶ್ನೆಪತ್ರಿಕೆ – ೩

### ಕನ್ನಡ ಸಾಹಿತ್ಯ ಚರಿತ್ರೆ

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

೧. ಚಂಪೂ ಕಾವ್ಯಗಳ ವಿಶೇಷತೆಯನ್ನು ವಿವರಿಸಿ. **೧x೧೫=೧೫**

**ಅಥವಾ**

ನಾಗವರ್ಮ, ಶಾಂತಿನಾಥ, ನಾಗಚಂದ್ರ, ಬ್ರಹ್ಮಶಿವ – ಇವರುಗಳಲ್ಲಿ ಮೂವರ ಕಾವ್ಯಗಳನ್ನು ಪರಿಚಯ ಮಾಡಿಕೊಡಿ.

೨. ರಗಳೆ ಕವಿ ಎಂದು ಹರಿಹರನನ್ನು ಕರೆಯಲು ಕಾರಣವೇನು? ಅವನ ಕೊಡುಗೆ ಏನು? **೧x೧೫=೧೫**

**ಅಥವಾ**

ರಾಘವಾಂಕನ ಹರಿಶ್ಚಂದ್ರ ಕಾವ್ಯದ ಮಹತ್ವವೇನು? ವಿವರಿಸಿ,

೩. ಕುಮಾರವ್ಯಾಸನ ಕೃಷ್ಣ ಕತೆಯನ್ನು ವಿವರಿಸಿ. **೧x೧೫=೧೫**

**ಅಥವಾ**

ದಾಸ ಸಾಹಿತ್ಯದ ಲಕ್ಷಣಗಳನ್ನು ವಿವರಿಸಿ?

೪. ಒಡೆಯರ ಕಾಲದ ಪ್ರಮುಖ ಕವಿಗಳ ಕೃತಿಗಳನ್ನು ಪರಿಚಯಿಸಿ **೧x೧೫=೧೫**

**ಅಥವಾ**

ರತ್ನಾಕರವರ್ಣಿ ಮತ್ತು ಭಟ್ಟಾಕಳಂಕ, ದೇವಚಂದ್ರ ಇವರಲ್ಲಿ ಯಾರಾದರೂ ಇಬ್ಬರ ಸ್ಥಾನವನ್ನು ವಿಶದಪಡಿಸಿ.

೫. ಮುದ್ದಣನ ರಾಮಾಯಣವನ್ನು ಆಧರಿಸಿದ ಕೃತಿಗಳ ವಿಶೇಷತೆಯನ್ನು ವಿವೇಚಿಸಿ. **೧x೧೫=೧೫**

**ಅಥವಾ**

ಕನ್ನಡ ಸಾಹಿತ್ಯದಲ್ಲಿ ಆಧುನಿಕ ಸಣ್ಣಕತೆಗಳು ಬೆಳೆದು ಬಂದ ಬಗೆಯನ್ನು ವಿವರಿಸಿ.

(ಪು.ತಿ.ನೋ.)



೬. **ಇವುಗಳಲ್ಲಿ ಐದಕ್ಕೆ ಟಿಪ್ಪಣಿ ಬರೆಯಿರಿ.** **೫x೫=೨೫**

೧. ಬ್ರಹ್ಮಶಿವ
೨. ಅಕ್ಕಮಹಾದೇವಿ
೩. ಭೀಮಕವಿ
೪. ಆಂಡಯ್ಯ
೫. ನರಹರಿ
೬. ಷಡಕ್ಷರದೇವ
೭. ಸರ್ವಜ್ಞ
೮. ಚಾವುಂಡರಾಯ

* * *

# ಕನ್ನಡ ಸಾಹಿತ್ಯ ಪರಿಷತ್ತು

ಬೆಂಗಳೂರು – ೧೮

ಸ್ಥಾಪನೆ : ೧೯೧೫

## ಕನ್ನಡ ಜಾಣ ಪರೀಕ್ಷೆ – ೨೦೨೪

**ಪ್ರಶ್ನೆಪತ್ರಿಕೆ – ೪**

## ಹೊಸಗನ್ನಡ ವ್ಯಾಕರಣ ಮತ್ತು ಛಂದಸ್ಸು

[ಮರುಪರೀಕ್ಷೆ ವಿದ್ಯಾರ್ಥಿಗಳಿಗೂ ಅನ್ವಯಿಸುತ್ತದೆ]

**ಅವಧಿ : ೩ ಗಂಟೆಗಳು** **ಗರಿಷ್ಠ ಅಂಕಗಳು : ೧೦೦**

### ಭಾಗ – ೧

### ಹೊಸಗನ್ನಡ ವ್ಯಾಕರಣ

**I. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **೨x೧೦=೨೦**

೧. ವ್ಯಾಕರಣ ಎಂದರೇನು? ವ್ಯಾಕರಣದ ಸ್ವರೂಪವನ್ನು ವಿವರಿಸಿ.

೨. ವರ್ಣಮಾಲೆ ಎಂದರೇನು? ಎಷ್ಟು ಬಗೆಯ ವರ್ಣಗಳಿವೆ ವಿವರಿಸಿ.

೩. ಸಂಧಿ ಎಂದರೇನು? ಕನ್ನಡದಲ್ಲಿ ಸಂಧಿಗಳೆಷ್ಟು ವಿವರಿಸಿ.

೪. ಕನ್ನಡದಲ್ಲಿ ಲಿಂಗಗಳೆಷ್ಟು? ಉದಾಹರಣೆ ಸಹಿತ ವಿವರಿಸಿ.

೫. ವಿಭಕ್ತಿ ಎಂದರೇನು? ಕನ್ನಡ ವಿಭಕ್ತಿಗಳನ್ನು ಪ್ರತ್ಯಯಗಳೊಂದಿಗೆ ಪರಿಚಯಿಸಿ.

**II. ಯಾವುದಾದರೂ ನಾಲ್ಕಕ್ಕೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.** **೪x೧=೪**

| | | | |
|---|---|---|---|
| ನಿದ್ರಾ | ಪ್ರಾಣ | ಆಶಾ | ಸ್ವರ್ಗ |
| ಶ್ರೀ | ಕುಕ್ಕಟ | ಸಂಸ್ಥಾ | ಅಕ್ಷರ |

**೧. ಮೂರನ್ನು ಬಿಡಿಸಿ ಬರೆದು ಸಂಧಿ/ಸಮಾಸದ ಹೆಸರನ್ನು ತಿಳಿಸಿ.** **೩x೨=೬**

| | | |
|---|---|---|
| ಹಣದಾಸೆ | ಬೇಯಿಸು | ಹೂಬುಟ್ಟಿ |
| ಒಕ್ಕಣ್ಣು | ಮುಂಗೈ | ಇಬ್ಭಾಗ |

**೨. ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೪x೫=೨೦**

| | | |
|---|---|---|
| ಸರ್ವನಾಮ | ವಚನ | ಸಹಜ ನಾಮಪದ |
| ವಿಭಕ್ತಿ | ಗಮಕಸಮಾಸ | ಸಕರ್ಮಕ ಕ್ರಿಯಾಪದ |

(ಪು.ತಿ.ನೋ.)



### ಭಾಗ – ೨

### ಛಂದಸ್ಸು

**III. ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ.** **೨x೧೦=೨೦**

೧. ಛಂದಸ್ಸಿನ ಸಾಮಾನ್ಯ ಸ್ವರೂಪಗಳನ್ನು ಚರ್ಚಿಸಿ.

೨. ಕನ್ನಡದ ಪ್ರಮುಖ ಛಂದೋಗ್ರಂಥಗಳನ್ನು ಪರಿಚಯಿಸಿ.

೩. ಖ್ಯಾತ ಕರ್ನಾಟಕಗಳಾವುವು? ಅವುಗಳಲ್ಲಿ ಎರಡನ್ನು ಪರಿಚಯಿಸಿ..

೪. ಆಧುನಿಕ ಛಂದಸ್ಸಿನ ಮುಖ್ಯ ಲಯಗಳೆಷ್ಟು? ಅವುಗಳ ಲಯವೈವಿಧ್ಯಗಳನ್ನು ವಿವರಿಸಿ.

**IV. ಅ. ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ.** **೪x೫=೨೦**

| | |
|---|---|
| ೧. ಕವಿರಾಜಮಾರ್ಗ | ೨. ಸಾನೆಟ್ |
| ೩. ಯತಿಯಸ್ವರೂಪ | ೪. ಕಂದಪದ್ಯ |
| ೫. ತ್ರಿಪದಿ | ೬. ಸರಳರಗಳೆ |
| ೭. ಷಟ್ಪದಿ | ೮. ಲಘು ಗುರು ವಿನ್ಯಾಸ |

**ಆ. ಒಂದು ಪದ್ಯಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ.**
**೧x೧೦=೧೦**

೧. ನೆಲಸುಗೆ ನಿನ್ನವಕ್ಷದೊಳೆನಿಶ್ಚಲ ಮೀಭಟಖಡ್ಗ ಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪಚಲಾಚಲ ರಾಜ್ಯಲಕ್ಷ್ಮಿ ಭೂ
ಲಲನೆಯನಯ್ಯನಿತ್ತುದುಮನಾಂನಿನಗಿತ್ತೆನಿ ದೇವುದಣ್ಣನಿ
ನ್ನೊಲಿದಲತಾಂಗಿಗಂಧರೆಗಮಾನೊಲಿದಂದು ನೆಗಟ್ಟೆಮಾಸದೆ?

೨. ಮರೆಯುತ್ತಿದ್ದ ಭಾಗ್ಯವೆಲ್ಲ
ಹರಿದು ಹೋಯಿತೆನುತ ತಿರುಕ
ಮರಳಿ ನಾಚಿ ಹೋಗುತ್ತಿದ್ದ ಮರುಳನಂತೆಯೇ
ಧರೆಯ ಭೋಗವನ್ನು ಮೆಚ್ಚಿ
ಪರವ ಮರೆತು ಕೆಡಲುಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವಾ

***